ದಿನಾಂಕಃ  12-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟಿ ಸವಾಲುಃ–</u>** ವಾದಿ ಪರ ಶ್ರೀ ವಿ ಬಿ ಟಿ ವಕೀಲರಿಂದ

ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಬಹಳ ಸಮಯದಿಂದ ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗುವ ಮುಂಚೆ ನೀಲಪ್ಪನ ಹೆಸರಿನಲ್ಲಿ ಇತ್ತು. ಈ ದಿನ ನಾನು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿಯೊಂದಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಹಾಗೂ 1 ನೇ ಪ್ರತಿವಾದಿಯ ನಡುವೆ ಏನು ದಾಖಲೆ ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ಅವರಿಬ್ಬರ ನಡುವೆ ಏನು ವ್ಯವಹಾರ ಆಗಿದೆ ಎಲ್ಲಿ ಆಗಿದೆ ಹಾಗೂ ಏನು ದಾಖಲೆ ಆಗಿದೆ ಎಂದು ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಹೆಂಡತಿ ಸವಣೂರ ದಿವಾಣಿ ನ್ಯಾಯಾಲಯದಲ್ಲಿ ಏನು ಕೇಸು ಹಾಕಿದ್ದರು ಹಾಗೂ ಅದರಲ್ಲಿ ಯಾವ ರೀತಿ ರಾಜಿ ಆಗಿದೆ ಎಂಬ ವಿಷಯ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಪತ್ರದಲ್ಲಿ ಸಹಿ ಮಾಡಿರುವುದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವಿಷಯದ ಮಾಹಿತಿ ಇಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಏನು ತಕರಾರು ಹಾಕಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ವಾದಿಯೊಂದಿಗೆ ಸವಣೂರ ಉಪನೊಂದಣಾಧಿಕಾರಿ ಕಚೇರಿಗೆ ಹಾಗೂ ತಾಲೂಕಾ ಕಚೇರಿಗೆ ಯಾವ ದಿನಾಂಕದಂದು ಬಂದಿದ್ದನು ಎಂದು

ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗೂ ಅವನ ಹೆಂಡತಿ ಒಂದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ, ಆದರೆ 1 ನೇ ಪ್ರತಿವಾದಿ ಜಾಸ್ತಿ ಮದ್ಯಪಾನ ಮಾಡುತ್ತಿದ್ದು ಹೆಚ್ಚು ಸಮಯ ಮನೆಯಲ್ಲಿ ಇರುವುದಿಲ್ಲ. 1 ನೇ ಪ್ರತಿವಾದಿ ಕಿರುಕುಳ ಕೊಟ್ಟಿದ್ದಾರೆ ಎಂದು ಹೇಳಿ ಅವನ ಹೆಂಡತಿ ಮತ್ತು ಮಕ್ಕಳು ಯಾವುದೇ ಕೇಸು ದಾಖಲಿಸಿಲ್ಲ ಎಂದರೆ ಆಸ್ತಿ ಕೇಳಿ ದಾವೆ ದಾಖಲಿಸಿದ್ದರು. ಆ ಕೇಸು ಯಾವ ನ್ಯಾಯಾಲಯದಲ್ಲಿ ಇದೆ ಎಂದು ನಾನು ಅವಿದ್ಯಾವಂತಳು ಆಗಿರುವುದರಿಂದ ಹೇಳಲು ಆಗುವುದಿಲ್ಲ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯ ಹೆಂಡತಿ ಯಾರೊಂದಿಗೆ ಏನು ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಯಾರ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಆಸ್ತಿಯ ಪೂರ್ವಕ್ಕೆ ಪಶ್ಚಿಮಕ್ಕೆ ಹಾಗೂ ದಕ್ಷಿಣಕ್ಕೆ ಯಾರ ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು 1 ನೇ ಪ್ರತಿವಾದಿಯ ಹೆಂಡತಿ ಖಾಸ ಸ್ನೇಹಿತೆಯರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಎಷ್ಟು ಸಾಲ ಇತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಯಾವುದೇ ಕೆಟ್ಟ ಅಭ್ಯಾಸಗಳು ಇರದಿದ್ದರೂ ಸಹ ಅವರ ಹೆಂಡತಿಗೆ ಮಾತು ಕೇಳಿಕೊಂಡು 1 ನೇ ಪ್ರತಿವಾದಿ ಮದ್ಯಪಾನ ಮಾಡುತ್ತಾನೆ ಹಾಗೂ ಜೂಜಾಟ ಆಡುತ್ತಾನೆ ಹಾಗೂ ಹೆಂಡತಿಯನ್ನು ಹೊಡೆಯುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ 1 ನೇ ಪ್ರತಿವಾದಿಯನ್ನು ಯಾವ ದಿನಾಂಕದಂದು ಸವಣೂರಿಗೆ ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಾದಿಯನ್ನು ಯಾವಾಗ ಕರೆದುಕೊಂಡು ಬಂದಿದ್ದರು ಎಂದರೆ ನಾನು ವಾದಿಯನ್ನು ನೋಡಿಯೇ ಇಲ್ಲ. ನನಗೆ ಯಾವುದೇ ವ್ಯವಹಾರದ ಮಾಹಿತಿ ಇಲ್ಲದಿದ್ದರೂ ಸಹ 1 ನೇ ಪ್ರತಿವಾದಿಯ ಹೆಂಡತಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಅವನ ಹೆಂಡತಿ ಕೂಡಿಕೊಂಡು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿಯ ಹೆಸರಿನಲ್ಲಿ ಖರೀದಿ ಕರಾರುಪತ್ರ ಬರೆದುಕೊಟ್ಟಿದ್ದರೂ ಸಹ ಅದನ್ನು ಮುಳಗಿಸುವ ಉದ್ದೇಶದಿಂದ 1 ನೇ ಪ್ರತಿವಾದಿ ಹಾಗೂ ಅವನ ಹೆಂಡತಿಯ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)